**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 561/2021**

**ಸಿ.ಡಬ್ಲ್ಯೂಃ 4 ಪಿ.ಡಬ್ಲ್ಯೂಃ 2**

| | | |
|---|---|---|
| ಸಾಕ್ಷಿದಾರನ ಹೆಸರು | : | ಜಡೆಯಪ್ಪ |
| ತಂದೆಯ ಹೆಸರು | : | ಮರಿಸ್ವಾಮಿ |
| ವಯಸ್ಸು | : | 45 ವರ್ಷ |
| ಕೆಲಸ | : | ವ್ಯವಸಾಯ |
| ವಾಸ | : | ನಡುವಿ |

**ಸಾಕ್ಷಿಗೆ ದಿನಾಂಕಃ 07.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ಚಾಸಾ 1 ನನ್ನ ಹೆಂಡತಿ. ಚಾಸಾ 5 ರಿಂದ 8 ಗೊತ್ತು. ಆರೋಪಿತರು ಗೊತ್ತು. ನಮ್ಮ ಹಾಗೂ ಆರೋಪಿತರು ನಡುವೆ 2021 ರಲ್ಲಿ ದಾರಿ ಸಲುವಾಗಿ ಬಾಯಿ ಮಾತಿನ ಜಗಳ ಆಗಿತ್ತು. ಆರೋಪಿತರು ನನಗೆ ಹೊಡೆದಿಲ್ಲ, ಬೈದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜಕರಿಗೆ ಸಹಾಯವಾಗಿ ಸಾಕ್ಷ್ಯ ನುಡಿಯುತ್ತಿಲ್ಲ ಆದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸ.ಸ.ಅ. ರವರಿಂದ**

2. ದಿಃ 05.03.2021 ರಂದು ರಾತ್ರಿ 07.00 ಗಂಟೆಗೆ ಆರೋಪಿತರು ಬಡಿಗೆ ಸಮೇತ ನಮ್ಮ ಮನೆ ಬಳಿ ಬಂದು ನನಗೆ ಬೈದು ಬಡಿಗೆಯಿಂದ ಹೊಡೆದರು ಎಂದರೆ

ಸರಿಯಲ್ಲ. ಆರೋಪಿ ನಂ 3 ಚಾಸಾ 1 ರವರ ಕೂದಲು ಹಿಡಿದು ಕಪಾಳಕ್ಕೆ ಹೊಡೆದನು ಎಂದರೆ ಸರಿಯಲ್ಲ. ಚಾಸಾ 5 ಮತ್ತು 6 ರವರಿಗೆ ಆರೋಪಿತರು ಬೈದು ಹೊಡೆದರು ಎಂದರೆ ಸರಿಯಲ್ಲ. ಆರೋಪಿತರು ಕಟ್ಟಿಗೆಯಿಂದ ಹೊಡೆದರು ಎಂದರೆ ಸರಿಯಲ್ಲ. ಆರೋಪಿತರು ನಮಗೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಂತರ ನಿಪಿಃ 1 ರಂತೆ ದೂರು ದಾಖಲು ಮಾಡಿದೆವು ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಈಗ ಓದಿ ಹೇಳಿದಂತೆ "ನಾನು.................ಪಡೆದಿರುವುದಿಲ್ಲ" ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿಃ 5 ಎಂದು ಗುರುತಿಸಲಾಯಿತು. ನಾವು ಹಾಗೂ ಆರೋಪಿತರು ಅನ್ಯೋನ್ಯವಾಗಿ ಇದ್ದೆವೆ. ಎಲ್ಲಾ ವಿಚಾರ ಸರಿ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ : ಇಲ್ಲ**

ಮರು-ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**

**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 561/2021**

**ಸಿ.ಡಬ್ಲ್ಯೂಃ 1   ಪಿ.ಡಬ್ಲ್ಯೂಃ 1**

ಸಾಕ್ಷಿದಾರನ ಹೆಸರು : ನಾಗಮ್ಮ
ಗಂಡನ ಹೆಸರು : ಜಡೆಯಪ್ಪ
ವಯಸ್ಸು : 40 ವರ್ಷ
ಕೆಲಸ : ಮನೆಕೆಲಸ
ವಾಸ : ನಡುವಿ

**ಸಾಕ್ಷಿಗೆ ದಿನಾಂಕಃ 07.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ಚಾಸಾ 4 ನನ್ನ ಗಂಡ. ಚಾಸಾ 5 ರಿಂದ 8 ಗೊತ್ತು. ಆರೋಪಿತರು ಗೊತ್ತು. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 1 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 2 ಹಾಗೂ ಸಾಕ್ಷಿ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಕ್ಷೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 3 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿಃ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಪೋಟೋವನ್ನು ನಿಪಿಃ 4 ಎಂದು ಗುರುತಿಸಲಾಯಿತು. 2021 ರಲ್ಲಿ ದಾರಿ ಸಲುವಾಗಿ ನಮ್ಮ ಹಾಗೂ ಆರೋಪಿತರ ನಡುವೆ ಬಾಯಿ ಮಾತಿನ ಜಗಳ ಆಗಿತ್ತು. ಆಗ ಪೋಲಿಸರು ಬಂದು ದಾಖಲೆಗೆ ಸಹಿ ಪಡೆದಿದ್ದರು. ನಿಪಿಃ 1 ರಿಂದ 3 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ದೂರು ನೀಡಿಲ್ಲ. ಪೋಲಿಸರು ಪಂಚಾನಮೆ ಮಾಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜಕರಿಗೆ ಸಹಾಯವಾಗಿ ಸಾಕ್ಷ್ಯ ನುಡಿಯುತ್ತಿಲ್ಲ ಆದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ)**

## ಪಾಟೀ ಸವಾಲುಃ ಸ.ಸ.ಅ. ರವರಿಂದ

2. ದಿಃ 05.03.2021 ರಂದು ರಾತ್ರಿ 07.00 ಗಂಟೆಗೆ ಆರೋಪಿತರು ಬಡಿಗೆ ಸಮೇತ ನಮ್ಮ ಮನೆ ಬಳಿ ಬಂದು ನನ್ನ ಗಂಡನಿಗೆ ಬೈದು ಬಡಿಗೆಯಿಂದ ಹೊಡೆದರು ಎಂದರೆ ಸರಿಯಲ್ಲ. ಆರೋಪಿ ನಂ 3 ನನ್ನ ಕೂದಲು ಹಿಡಿದು ಕಪಾಳಕ್ಕೆ ಹೊಡೆದನು ಎಂದರೆ ಸರಿಯಲ್ಲ. ಚಾಸಾ 5 ಮತ್ತು 6 ರವರಿಗೆ ಆರೋಪಿತರು ಬೈದು ಹೊಡೆದರು ಎಂದರೆ ಸರಿಯಲ್ಲ. ಆರೋಪಿತರು ಕಟ್ಟಿಗೆಯಿಂದ ಹೊಡೆದರು ಎಂದರೆ ಸರಿಯಲ್ಲ. ಆರೋಪಿತರು ನಮಗೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಂತರ ನಿಪಿಃ 1 ರಂತೆ ದೂರು ದಾಖಲು ಮಾಡಿದೆವು ಎಂದರೆ ಸರಿಯಲ್ಲ. ಪೋಲಿಸರು ನಿಪಿಃ 2 ರಂತೆ ಪಂಚನಾಮೆ ಮಾಡಿ, ನಿಪಿಃ 3 ಹಾಗೂ 4 ರಂತೆ ನಕ್ಷೆ ಹಾಗೂ ಪೊಟೋ ತೆಗೆದರು ಎಂದರೆ ಸರಿಯಲ್ಲ. ನಾವು ಹಾಗೂ ಆರೋಪಿತರು ಅನ್ಯೋನ್ಯವಾಗಿ ಇದ್ದೆವೆ. ಎಲ್ಲಾ ವಿಚಾರ ಸರಿ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ : ಇಲ್ಲ**

ಮರು-ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**